# ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

**ಎಸ್‌ಸಿ. 68/2024**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಮಹೇಶ್ | | ***ಪ್ರಮಾಣ ಮಾಡಿಸಿದ ದಿನಾಂಕಃ*** |
| **ತಂದೆ/ಗಂಡನ ಹೆಸರು** | ಃ ಶ್ರೀ ಲೇಟ್ ಗುರುಲಿಂಗಪ್ಪ | | **26.11.2024** |
| **ವಯಸ್ಸು** | ಃ **47** ವರ್ಷ | | |
| **ವೃತ್ತಿ** | ಃ ವ್ಯವಸಾಯ | **ಪ್ರಾ.ಸಾ.** ಃ | **05** |
| **ವಾಸಸ್ಥಳ** | ಃ ಚಿಕ್ಕ ಕವಲಂದೆ | **ಚಾ.ಸಾ.** ಃ | **07** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಮೃತ ಪರಶಿವಪ್ಪ ನನ್ನ ಹೆಂಡತಿಯ ತಂದೆ ಇರುತ್ತಾರೆ. ನನ್ನ ಮಾವನಿಗೆ ಇಬ್ಬರು ಹೆಣ್ಣು ಮಕ್ಕಳು. ಅವರಿಗೆ ಗಂಡು ಮಕ್ಕಳು ಇರಲಿಲ್ಲ. ನನ್ನ ಮಾವನಿಗೆ ಮರಳಿಪುರ ಗ್ರಾಮದಲ್ಲಿ 2 ಎಕರೆ ಜಮೀನು ಇತ್ತು . ಅವರ ಜಮೀನಿನ ಪಕ್ಕದಲ್ಲಿ ಆರೋಪಿತರ ಜಮೀನು ಇತ್ತು. ಅಂದಾಜು 10 ಕಾಲದಿಂದ ನನ್ನ ಮಾವನ ಜಮೀನಿನಲ್ಲಿ ವ್ಯವಸಾಯ ಮಾಡಿರಲಿಲ್ಲ. ಆರೋಪಿತರು ನನ್ನ ಮಾವನ ಜಮೀನಿನ ಮೂಲಕ ತಮ್ಮ ಜಮೀನಿಗೆ ಹೋಗುತ್ತಿದ್ದರು. ನನ್ನ ಮಾವನ ಜಮೀನಿನಲ್ಲಿ ದನಕರು ಮೇಯಿಸುತ್ತಿದ್ದರು. ಒಂದು ವರ್ಷದ ಹಿಂದೆ ನನ್ನ ಮಾವ ಅ ಜಮೀನನ್ನು ವ್ಯವಸಾಯ ಮಾಡುವ ಸಲುವಾಗಿ ಉಳುಮೆ ಮಾಡಿಸಿದ್ದರು. ಆಗ ಆರೋಪಿತರು ನಮಗೆ ತಿರುಗಾಡಲು ದಾರಿ ಎಲ್ಲಿ ಎಂದು ಕೇಳಿದರು. ಆಗ ನಾನು ಮತ್ತು ಪರಶಿವಪ್ಪ ನವರ ಬಾಮೈದ ಮಹದೇವಸ್ವಾಮಿ ಸೇರಿ ದಾರಿ ಮಾಡಿಸಿಕೊಡುತ್ತೇವೆ ಎಂದು ಹೇಳಿದ್ದೇವು, ಪರಶಿವಪ್ಪರವರು ಸಹ ಅದಕ್ಕೆ ಒಪ್ಪಿದ್ದರು.

ದಿಃ 29.11.2023 ರಂದು ಸಂಜೆ 5 ಗಂಟೆಗೆ ನನ್ನ ಅತ್ತೆ ಮತ್ತು ಮಾವ ಜಮೀನಿಗೆ ಹೋಗಿದ್ದರು. ಅ ಕಾಲಕ್ಕೆ ಆರೋಪಿತರು ದಾರಿಯ ವಿಚಾರಕ್ಕೆ ನನ್ನ ಮಾವನ ಜೊತೆ ಜಗಳ ತೆಗೆದು ಕಣ್ಣಿಗೆ ಮಣ್ಣು ಎರಚಿ, ಮಚ್ಚಿನಿಂದ ಹೊಡೆದಿದ್ದರು. ಅ ಗಲಾಟೆಯಾಗುವ 10 ನಿಮಿಷ ಮೊದಲು ನನಗೆ ಫೋನ್ ಮಾಡಿ ಗಲಾಟೆ ಮಾಡಲು ಬಂದಿದ್ದಾರೆ ನೀವು ಬನ್ನಿ ಎಂದು ಹೇಳಿದ್ದರು. ಅ ಕಾಲಕ್ಕೆ ನಾನು ಅಲ್ಲಿಗೆ ಹೋದಾಗ ಆದೇಶ ಮಚ್ಚಿನಿಂದ ಹೊಡೆಯುತ್ತಿದ್ದ. ಆಗ ನಾನು ಅತ್ತೆಯನ್ನು ಪ್ರಭುಸ್ವಾಮಿ ಎಳೆದು ಬಿಸಾಕಿದ್ದ. ಅ ಘಟನಾ ಕಾಲಕ್ಕೆ ಆದೇಶ ಫೋನ್ ಮಾಡಿ ಹೇಳಿದ್ದರಿಂದ ಮಾದೇಶನು ಸಹ ಅಲ್ಲಿಗೆ ಬಂದಿದ್ದರು. ಹೊಡೆದ ಬಳಿಕೆ ಆರೋಪಿತರು ತಮ್ಮ ಜಮೀನಿನ ಕಡೆಗೆ ಹೋಗಿದ್ದರು. ನಂತರ ಅಂಬುಲೆನ್ಸ್ ಸಿಗುವುದಿಲ್ಲ ಎಂದು ಮಳಲಿಪುರದ ಒಮಿನಿ ಕಾರಿನಲ್ಲಿ ನನ್ನ ಮಾವನನ್ನು ಮೈಸೂರಿನ ಮಿಷನ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನನ್ನ ಮಾವನಿಗೆ ಜಾಸ್ತಿ ಗಾಯಗಳಾಗಿದ್ದರಿಂದ ಸಣ್ಣ ಪುಟ್ಟ ಆಸ್ಪತ್ರೆ ಬೇಡ ಎಂದು ಮಿಷನ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಆ ಕಾಲಕ್ಕೆ ರಾತ್ರಿ *1.10* ನಿಮಿಷಕ್ಕೆ ನನ್ನ ಮಾವ ಮರಣ ಹೊಂದಿದ್ದರು. ಈ ಬಗ್ಗೆ ನಾನು ಹೇಳಿಕೆ ಕೊಟ್ಟಿದ್ದೇನೆ. ನಂಜನಗೂಡು ನ್ಯಾಯಾಲಯದಲ್ಲೂ ಸಹ ಈ ಬಗ್ಗೆ ಹೇಳಿಕೆ ಕೊಟ್ಟಿದ್ದೇನೆ. ಈಗ ನಾನು ನೋಡುತ್ತಿರುವ ಹೇಳಿಕೆ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಹೇಳಿಕೆಯನ್ನು ನಿಪಿ.23 ಎಂದು ಸಹಿಯನ್ನು ನಿಪಿ.23(ಎ) ಎಂದು ಗುರುತಿಸಿದೆ. ಈ ಬಗ್ಗೆ ನನ್ನ ಅತ್ತೆ ದೂರು ಕೊಟ್ಟಿದ್ದರು.

ದಿಃ 30.11.2023 ರಂದು ಸಂಜೆ 4 ಗಂಟೆಗೆ ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದರು. ಅ ಕಾಲಕ್ಕೆ ನಾನೇ ಘಟನಾ ಸ್ಥಳವನ್ನು ತೋರಿಸಿದ್ದೆ. ಅ ಕಾಲಕ್ಕೆ ಚಂದ್ರಶೇಖರ ಸ್ವಾಮಿ ಮತ್ತು ಮನು ಎಂಬುವವರು ಹಾಜರಿದ್ದರು. ಅ ಕಾಲಕ್ಕೆ ಚನಾಕ್ಷಿ ಮರದ ತುಂಡುಗಳು ಅಲ್ಲಿ

ಬಿದ್ದಿದ್ದವು ಮತ್ತು ರಕ್ತದ ಕಲೆಗಳು ಇದ್ದವು. ಅ ಕಾಲಕ್ಕೆ ನನ್ನ ಮಾವನ ಹಾವಯಿ ಚಪ್ಪಲಿ, 4 ಚನಾಕ್ಷಿ ಮರದ ಕಡ್ಡಿ, ರಕ್ತವಿದ್ದು ಮಣ್ಣು, ರಕ್ತ ಇಲ್ಲದ ಮಣ್ಣು, ಹತ್ತಿಗೆ ಸಂಗ್ರಹಿಸಿದ ರಕ್ತ ಎಲ್ಲವನ್ನೂ ಸೀಲ್ ಮಾಡಿ ಅಮಾನತ್ತು ಪಡಿಸಿಕೊಂಡಿದ್ದರು. ಈಗ ನಾನು ನೋಡುತ್ತಿರುವ ನಿಪಿ.18 ಅ ಸ್ಥಳದಲ್ಲಿ ಮಾಡಿದ್ದ ಮಹಜರ್ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿಸಹಿಯನ್ನು ನಿಪಿ.18(ಬಿ) ಎಂದು ಗುರುತಿಸಿದೆ. ನಿಪಿ.19 ಪೋಟೋ ಅ ಸ್ಥಳದಲ್ಲಿ ತೆಗೆದ ಪೋಟೋವಿದೆ. ಈಗ ನಾನು ನೋಡುತ್ತಿರುವ ಎಂ.ಒ 6 ರಿಂದ 10 ಅ ಸ್ಥಳದಿಂದ ಸಂಗ್ರಹಿಸಿದ ವಸ್ತುಗಳಿವೆ. ಅ ಕಾಲಕ್ಕೆ ನನ್ನ ಮಾವ ರಸ್ತೆ ಮಾಡುವ ಸಲುವಾಗಿ ಚನಾಕ್ಷಿ ಮರವನ್ನು ಕಡಿಸಿದ್ದರಿಂದ ಅಲ್ಲಿ ಚನಾಕ್ಷಿ ಮರದ ತುಂಡುಗಳು ಬಿದ್ದಿದ್ದವು. ಈಗ ನಾನು ನೋಡುತ್ತಿರುವ ಎಂ.ಒ-1 ಮಚ್ಚು ಆದೇಶ ನನ್ನ ಮಾವನಿಗೆ ಹೊಡೆಯಲು ಉಪಯೋಗಿಸಿದ್ದ ಮಚ್ಚು ಇದೆ. ಈಗ ನಾನು ನೋಡುತ್ತಿರುವ ಎಂ. 2 ರಿಂದ 5 ಘಟನಾ ಕಾಲಕ್ಕೆ ನನ್ನ ಮಾವ ಧರಿಸಿದ ಬಟ್ಟೆಗಳಿವೆ.

<u>ಪಾಟೀ ಸವಾಲು :</u> ಈ ವೇಳೆಗೆ ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಆರೋಪಿತರು ಸಮಯ ಕೇಳಿದ್ದು, ಸೂಕ್ತ ಕಾರಣವಿಲ್ಲದಿದ್ದರಿಂದ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ:- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*